ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Friday, the 25th August 1978/Bhadrapada 3, 1900 S.E

The House met in the Assembly Chamber, Vidhana Soudha, at One of the Clock.

[MR. SPEAKER (SRI P. VENKATARAMANA) in the Chair.]

STARRED QUESTIONS
(to which oral Answers were given)

Elections to Mysore Town Municipality

54. SRI H. GANGADHARAN (Krishnaraja).—Will the Minister for Municipal Administration be pleased to state :—

(*a*) the reasons for not conducting elections to the Municipality of Mysore City for the last ten years;

(*b*) whether Government is thinking of holding elections at least in future ; if so, when the election would be conducted ?

SRI H. C. SRIKANTAIAH (Minister for Municipal Administration).—

(*a*) It is not from ten years. But due to some difficulties experienced in fixing devisions of Mysore Corporation area and the matter of converting the Mysore Municipality into Corporation which was under consideration of the Government, the election could not be conducted since 1973.

(*b*) The matter of conducting elections to the Mysore Corporation very shortly, is under consideration of the Government.

ಶ್ರೀ ಹೆಚ್. ಗಂಗಾಧರನ್.—ಸ್ವಾಮಿ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ತಾವು "ಹತ್ತು ವರ್ಷಗಳಿಂದ ಅಲ್ಲ. ಆದರೆ ೧೯೭೩ ರಿಂದ ಮೈಸೂರು ನಗರಸಭೆಯ ಪ್ರದೇಶ ಕ್ಷೇತ್ರಗಳನ್ನು ನಿರ್ಧರಿಸುವ ಬಗ್ಗೆ ಕೆಲವು ತೊಂದರೆಗಳಿಂದ ಚುನಾವಣೆ ನಡೆಸಲು ಸಾಧ್ಯವಾಗಲಿಲ್ಲ ಎಂದು ಹೇಳಿದ್ದೀರಿ. ಆ ಪ್ರದೇಶಗಳು ಯಾವುವು ಎಂಬುದನ್ನು ಹೇಳುತ್ತೀರಾ ?

† ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಸ್ವಾಮಿ, ಏನೇನು ತೊಂದರೆಗಳಿವೆ ಎಂಬುದನ್ನು ನಾನು ಹೇಳಿದ್ದೇನೆ. ಮೊದಲು ಟೆರಿಟೋರಿಯಲ್ ಜೂರಿಸ್‌ಡಿಕ್ಷನ್ ಆದಮೇಲೆ ಕಾರ್ಪೊರೇಷನ್ ಆಕ್ಟ್ ತಿದ್ದುಪಡಿ ಮಾಡಬೇಕಾಗಿರುವುದರಿಂದ ಮತ್ತು ರಿಸರ್ವೇಷನ್ ಬಗ್ಗೆ ಕೂಡ ನಿಗಧಿ ಮಾಡಬೇಕಾಗಿರು

† indicates that remarks or speeches have not been revised by the member concerned.

ವುದರಿಂದ ನಾವು ಚುನಾವಣೆ ಮಾಡಲು ಸಾಧ್ಯವಾಗಲಿಲ್ಲ. ಆದರೆ ಆದಷ್ಟು ಬೇಗ ಅಂದರೆ ಈ ವರ್ಷದ ಕೊನೆಯೊಳಗಾಗಿ ಚುನಾವಣೆಯನ್ನು ಮಾಡುತ್ತೇವೆಂದು ಹೇಳಬಯಸುತ್ತೇನೆ. ಇಷ್ಟರಲ್ಲೇ ಇದಕ್ಕೆ ಸಂಬಂಧಪಟ್ಟಂತೆ ಒಂದು ತಿದ್ದುಪಡಿ ಮಸೂದೆ ತಮ್ಮ ಮುಂದೆ ಬರುತ್ತದೆ, ಅದನ್ನು ಆದಷ್ಟು ಬೇಗ ವಾಪಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪೆಚ್. ಗಂಗಾಧರನ್.—ಕಾರ್ಪೊರೇಷನ್ ವ್ಯಾಪ್ತಿಗೆ ಕೇವಲ ಪಶ್ಚಿಮದ ಕಡೆಯಲ್ಲಿರುವ ಗ್ರಾಮಗಳನ್ನು ಸೇರಿಸಿಕೊಳ್ಳುವುದಾಗಿ ತಿಳಿದುಬಂದಿವೆ. ಆದರೆ ಮೈಸೂರು ನಗರದ ನಾಲ್ಕೂ ಭಾಗ ಗಳಲ್ಲಿರತಕ್ಕ ಗ್ರಾಮಗಳನ್ನು ಸೇರಿಸಿಕೊಳ್ಳುವುದರಲ್ಲಿ ನಿಮಗಾಗುವ ತೊಂದರೆಯಾದರೂ ಏನು ಎಂದು ತಮ್ಮನ್ನು ಕೇಳಬಯಸುತ್ತೇನೆ. ಅಥವಾ ಒಂದು ವೇಳೆ ಆ ಗ್ರಾಮಗಳನ್ನು ನಗರಸಭೆಯ ವ್ಯಾಪ್ತಿ ಯೊಳಗೆ ಸೇರಿಸಿಕೊಂಡಿದ್ದರೆ ಯಾವಾಗ ಸೇರಿಸಿಕೊಂಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಪೆಚ್. ಸಿ. ಶ್ರೀಕಂಠಯ್ಯ.—ಈ ಬಗ್ಗೆ ಇನ್ನೂ ಒಂದು ನಿರ್ದಿಷ್ಟವಾದ ಅಂತಿಮ ತೀರ್ಮಾನ ಬಂದಿಲ್ಲ. ಒಂದು ವೇಳೆ ತಮ್ಮ ಸಲಹೆಗಳೇನಾದರೂ ಇದ್ದರೆ ಅದನ್ನು ಕಳುಹಿಸಿಕೊಟ್ಟರೆ ಅದು ಫೀಸ್ ಬಿಲ್ ಎಂದು ತಿಳಿದು ಬಂದಲ್ಲಿ ಖಂಡಿತ ಸೇರಿಸುತ್ತೇವೆ.

ಶ್ರೀ ಪೆಚ್. ಗಂಗಾಧರನ್.—ಬೈ ಎಲೆಕ್ಷನ್ ಇದೆ ಅದು ಮುಗಿಯಲಿ ಎಂದು ಸುಮ್ಮನಿದ್ದೀರೋ ಅಥವಾ ಬೇರೆ ಇನ್ನೇನಾದರೂ ಉದ್ದೇಶ ಇಟ್ಟುಕೊಂಡಿದ್ದೀರೋ ?

ಶ್ರೀ ಪೆಚ್. ಸಿ. ಶ್ರೀಕಂಠಯ್ಯ.—ಅಂಥ ಉದ್ದೇಶ ಏನೂ ಇಲ್ಲ. ಈಗ ಮೊದಲು ಬೆಂಗಳೂರು, ಹುಬ್ಬಳ್ಳಿ-ಧಾರವಾಡ, ಮೈಸೂರು ಮತ್ತು ಮಂಗಳೂರು ನಗರಸಭೆಗಳಿಗೆ ಸಂಬಂಧಿಸಿದ ಕಾರ್ಪೊರೇಷನ್ ಆಕ್ಟ್ ತಿದ್ದುಪಡಿ ಮಾಡಿ ನಂತರ ಚುನಾವಣೆಗಳನ್ನು ಮಾಡುತ್ತೇವೆ.

Levy of interest on Takkavi and Land Development Loans

315. Sri D. T. Mayanna (Huliyurdurga).—Will the Minister for Revenue be pleased to state :—

(*a*) the rate at which the simple and penal interest would be levied by the Government for the loans of the Land Development Banks and Takkavi loans;

(*b*) whether the Government would change its policy of levying intereset on these loans as it affects the ryots ?

Sri B. Basavalingappa (Minister for Revenue).—(*a*) Simple interest at the rate of 11% and penal interest at the rate of 12½% is being levied for the loans of the Land Development Banks. The Government is levying simple interest at the rate of 8½% and penal interest at the rate of 12½% for the Takkavi loans, as per the provisions of the Karnataka Agriculturists loans Rules, 1966 and the Karnataka Land Improvement Loans Rules, 1966.

(*b*) It has not come to the notice of the Government that the ryots are affected on account of the policy of levying interest. Hence, the question of changing the said policy does not arise.

ಶ್ರೀ ಡಿ. ಟಿ. ಮಾಯಣ್ಣ.—ಸ್ವಾಮಿ ನನ್ನ (ಅ) ಪ್ರಶ್ನೆಗೆ ಉತ್ತರವಾಗಿ "ಭೂ ಅಭಿವೃದ್ಧಿ ಬ್ಯಾಂಕಿನ ಸಾಲಗಳಿಗೆ ಸರಳ ಬಡ್ಡಿಯನ್ನು ಶೇಕಡ ೧೧ ರಂತೆ ಮತ್ತು ಸುಸ್ತಿ ಬಡ್ಡಿಯೂ ಸೇರಿದಂತೆ ಶೇಕಡ ಹನ್ನೆರಡೂವರೆ ದರದಲ್ಲಿ ವಿಧಿಸಲಾಗುತ್ತದೆ. ಕರ್ನಾಟಕ ಅಗ್ರಿಕಲ್ಚರಿಸ್ಟ್ ಲೋನ್ಸ್ ರೂಲ್ಸ್ ೧೯೬೬ ಮತ್ತು ಕರ್ನಾಟಕ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ಸ್ ರೂಲ್ಸ್ ೧೯೬೬ರ ಪ್ರಕಾರ